ಪ್ರಾತಿನಿಧಿಕವಾಗಿ ನೆನಪು ಮಾಡಿಕೊಳ್ಳಬಹುದು. ಉತ್ತರ ಕರ್ನಾಟಕದಲ್ಲಿ ಒಂದು ದಲಿತ ಸಮಾವೇಶ. ಅದಕ್ಕೆ ಡಿ.ಆರ್. ಸೇರಿದಂತೆ ನಾವೆಲ್ಲರೂ ಹೋಗಿದ್ವಿ. ಅದನ್ನು ಆಯೋಜಿಸಿದ್ದವರು ಓರ್ವ ಪ್ರಭಾವಿ ಮುಖಂಡರು. ಟ್ರ್ಯಾಕ್ಟರ್, ವ್ಯಾನುಗಳಲ್ಲಿ ಜನ ಬರುತ್ತಲೇ ಇದ್ದರು. ವೇದಿಕೆಯಲ್ಲಿ, 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಹಾಡನ್ನು ಹಾಡುತ್ತಿದ್ದರು. ಹೋರಾಟದ ಆಶಯ ಮತ್ತು ಅದರ ಸಾಕ್ಷಾತ್ಕಾರ ಎರಡೂ ಏಕತ್ರಗೊಂಡ ಆ ಗಳಿಗೆ ನನ್ನ ಮನಸ್ಸಿನಲ್ಲಿ ಸದಾ ಉಳಿದಿದೆ.

◆ **ಸುಮಾರು ಒಂದು, ಒಂದೂವರೆ ದಶಕಗಳ ಕಾಲ ಹೀಗೆ ಉತ್ಕಟವಾಗಿ ಸ್ಫೋಟಿಸಿದ ಈ ಚಳವಳಿ ನಂತರದ ದಿನಗಳಲ್ಲಿ ಸಹಜವಾಗಿಯೇ ದುರ್ಬಲವಾಯಿತು, ವಿಘಟನೆಗೊಂಡಿತು, ಸಂಘಟನೆಯಲ್ಲಿ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡವು ಅಲ್ಲವೆ?**

ದೇವನೂರು ಇದನ್ನು 'ವಿಸ್ತರಣೆ' ಅಂತ ಕರೀತಾರೆ. ಇದು ಏನೂ ಇರಲಿ, ನನಗನ್ನಿಸೋದು – ದಲಿತರ ಎಡ ಬಲದ ಪ್ರಶ್ನೆಗಳು ಮುನ್ನೆಲೆಗೆ ಬಂದು ಈ ಹೋರಾಟದ ಸ್ವರೂಪವೇ ಬದಲಾಗ್ತಾ ಹೋಯಿತು ಅಂತ.



◆ **ಇದಕ್ಕೆ ಪೂರಕವಾಗಿ ಇನ್ನೊಂದು ಪ್ರಶ್ನೆ. ಇದೇ ವಿಸ್ತರಣೆಯನ್ನೇ ಆಧರಿಸಿ ಕೇಳುವುದಾದರೆ, ನಂಜುಂಡಸ್ವಾಮಿ ಮತ್ತು ಲಂಕೇಶ್ ನಿಮ್ಮ ಬದುಕು ಮತ್ತು ವ್ಯಕ್ತಿತ್ವದ ಮೇಲೆ ಬೀರಿದ ಪ್ರಭಾವ, ಅವರ ಒಡನಾಟದ ಬಗೆಗೆ ಕೆಲವು ಮಾತುಗಳನ್ನು ಹೇಳಿ.**

ನಂಜುಂಡಸ್ವಾಮಿ ಅವರನ್ನು ನಾವು ಪ್ರೊಫೆಸರ್ ಎಂಡಿಎನ್ ಅಂತಲೇ ಕರೆಯುತ್ತಿದ್ದುದು. ಅವರು ರೈತ ಸಂಘಟನೆಯನ್ನು ಕಟ್ಟುವ ಮುನ್ನ ಕರ್ನಾಟಕದಲ್ಲಿ ವೈಚಾರಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ವಿದ್ಯಮಾನಗಳಿಗೆ ಯುವಜನತೆ ಹೇಗೆ ಸ್ಪಂದಿಸಬೇಕೆಂಬುದನ್ನು 'ಸಮಾಜವಾದಿ ಯುವಜನ ಸಭಾ' ಎಂಬ ಸಂಘಟನೆಯನ್ನು ಪ್ರಾರಂಭಿಸಿ, ಹೊಸ ಅಲೆಯನ್ನುಂಟು ಮಾಡಿದ್ದರು. ನಾವು ಕೆಲವರು 'ಯುವಜನ ಸಭಾ'ದ ಸಕ್ರಿಯ ಸದಸ್ಯರಾಗಿದ್ದೆವು. ಪೆರಿಯಾರ್, ಅಬ್ರಹಾಂ ಕೋವೂರು ಮುಂತಾದ ಪ್ರಖರ ವೈಚಾರಿಕರನ್ನು, ವೈಜ್ಞಾನಿಕ ಚಿಂತಕರನ್ನು ಆಹ್ವಾನಿಸಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸುತ್ತಿದ್ದರು. ಎಂಡಿಎನ್ ಅವರ ಬಗ್ಗೆ ಮುಖ್ಯವಾದ ಎರಡು ಮಾತುಗಳನ್ನು ಹೇಳಬೇಕು. ಏನೆಂದರೆ, ಅವರ ಅಸಾಧಾರಣ ಬುದ್ಧಿವಂತಿಕೆ ಮತ್ತು ತಾತ್ವಿಕ ಸ್ಪಷ್ಟತೆ. ನಿಖರ ಅಂಕಿಸಂಖ್ಯೆಗಳೊಡನೆ ಕನ್ನಡ, ಇಂಗ್ಲಿಷಿನಲ್ಲಿ ನಿರರ್ಗಳ ಮಾತು. ಇವೆಲ್ಲ ತರುಣರಾಗಿದ್ದ ನಮ್ಮನ್ನು ಆಕರ್ಷಿಸಿದ್ದವು. ಅವರು ತಾವು ಆಡಿದುದನ್ನು ಮಾಡಿ, ಬದುಕಿ ತೋರಿಸುತ್ತಿದ್ದರು. ಪ್ರಧಾನಿ ಇಂದಿರಾಗಾಂಧಿಯವರ ನಿಲುವು ಸರಿಯಿಲ್ಲವೆನಿಸಿದರೆ ನಾವೆಲ್ಲ ವಿಮಾನ ನಿಲ್ದಾಣಕ್ಕೇ ಹೋಗಿ ಕಪ್ಪು ಬಾವುಟ ತೋರಿಸುತ್ತಿದ್ದೆವು, ವಿಧಾನಸಭೆ ನಡೆಯುವಾಗ ಗ್ಯಾಲರಿಯಿಂದ ಕರಪತ್ರ ತೂರಿ ಘೋಷಣೆಗಳನ್ನು ಕೂಗಿ ಪೋಲೀಸರಿಂದ ದಸ್ತಗಿರಿಯಾಗುತ್ತಿದ್ದೆವು. ಜನಪರ ನಿಲುವುಗಳಿಗೆ ಬದ್ಧರಾಗಿ ನಿಲ್ಲುವುದಕ್ಕೆ, ಮಾತಾಡುವುದಕ್ಕೆ ಆ ಕಾಲಕ್ಕೆ ಬೇಕಾಗಿದ್ದ ಅಪಾರ ಧೈರ್ಯವನ್ನು, ಉತ್ಸಾಹವನ್ನು ಎಂಡಿಎನ್ ತುಂಬಿದ್ದರು.

ಇಂಥದೇ ಒಂದು ಸಂದರ್ಭದಲ್ಲಿ ಎಂಡಿಎನ್ ಅವರು ನನಗೆ ಲಂಕೇಶ್ ಅವರನ್ನು ಪರಿಚಯಿಸಿದರು. ಅವರನ್ನು ದೂರದಿಂದ ನೋಡಿ, ಓದಿ ಬಲ್ಲವನಾಗಿದ್ದೆ. ಅಂದು ಆದ ನೇರ ಪರಿಚಯ ಅವರ ಅಂತಿಮ ದಿನಗಳವರೆಗೆ ಮುಂದುವರಿಯಿತು. ಲಂಕೇಶ್ ನಮ್ಮ ಕಾಲದ ಜೀನಿಯಸ್. ಅವರ ಜೊತೆಗಿನ ಒಡನಾಟ ನನ್ನ ಮಟ್ಟಿಗೆ ಅಮೂಲ್ಯವಾದುದು. ಅನೇಕ ವರ್ಷಗಳವರೆಗೆ ನಾನು ಹೆಚ್ಚೂಕಡಿಮೆ ಪ್ರತಿದಿನ ಅವರನ್ನು ಭೇಟಿಯಾಗುತ್ತಿದ್ದೆ. ನಾನು ಮದ್ರಾಸಿನಲ್ಲಿ ನೌಕರಿ ಮಾಡುತ್ತಿದ್ದಾಗಲೂ ವಾರಕ್ಕೊಮ್ಮೆ ಅವರನ್ನು ಭೆಟ್ಟಿ ಮಾಡಲೆಂದೇ ಬರುತ್ತಿದ್ದೆ.

◆ **ಲಂಕೇಶ್ ಜೊತೆಗಿನ ಒಡನಾಟ ಸ್ವಲ್ಪ ಕಷ್ಟದ್ದು ಅನ್ನುವ ಮಾತಿದೆಯಲ್ಲಾ...**

ಸ್ವಲ್ಪ ಹೆಚ್ಚೇ ಕಷ್ಟದ್ದೂ ಇದ್ದೀತು! ಈ ಕ್ಷಣಕ್ಕೆ ನನಗೆ